**I. 1 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. (20 x 1 = 20)**

**1.** "ಇಂಡಿಕಾ" ಕೃತಿಯನ್ನು ರಚಿಸಿದವರು,

**A.** ವಿಷ್ಣುಗುಪ್ತ **B.** ಮೆಗಾಸ್ತನೀಸ್

**C.** ವಿಶಾಖದತ್ತ **D.** ಕಾಳಿದಾಸ

ಉತ್ತರ: **B.** ಮೆಗಾಸ್ತನೀಸ್

**2.** ಅಶೋಕನು "ಧರ್ಮ ಮಹಾಮಾತ್ರ"ರನ್ನು ನೇಮಿಸಲು ಕಾರಣ,

**A.** ಉತ್ತಮ ಆಡಳಿತಕ್ಕಾಗಿ

**B.** ರಾಜ್ಯದ ಭದ್ರತೆಗಾಗಿ

**C.** ಬುದ್ಧನ ವಿಚಾರಗಳ ಪ್ರಸಾರಕ್ಕಾಗಿ

**D.** ವಿಹಾರಗಳ ನಿರ್ಮಾಣಕ್ಕಾಗಿ

ಉತ್ತರ: **C.** ಬುದ್ಧನ ವಿಚಾರಗಳ ಪ್ರಸಾರಕ್ಕಾಗಿ

**3.** ಕುಶಾನರ ಕಾಲದಲ್ಲಿ ವಿಕಸಿತಗೊಂಡ ಶಿಲ್ಪಕಲೆ,

**A.** ಗಾಂಧಾರ **B.** ದ್ರಾವಿಡ

**C.** ವೇಸರ **D.** ರಾಯಗೋಪುರ

ಉತ್ತರ: **A.** ಗಾಂಧಾರ

**4.** ಕಾಳಿದಾಸ : ಋತುಸಂಹಾರ :: ವರಾಹಮಿಹಿರ : ___________ .

**A.** ಮೃಚ್ಛಕಟಿಕ **B.** ಮುದ್ರಾರಾಕ್ಷಸ

**C.** ಚರಕ ಸಂಹಿತ **D.** ಪಂಚಸಿದ್ಧಾಂತಿಕಾ

ಉತ್ತರ: **D.** ಪಂಚಸಿದ್ಧಾಂತಿಕಾ

**5.** ವರ್ಧನರ ಕಾಲದಲ್ಲಿ "ಮಹಾಬಲಾಧಿಕೃತ" ಈ ಕ್ಷೇತ್ರದ ಜವಾಬ್ದಾರಿ ಹೊಂದಿದ್ದರು.

**A.** ಸೈನ್ಯ **B.** ಕಂದಾಯ

**C.** ಶಿಕ್ಷಣ **D.** ಆರೋಗ್ಯ

NEEDS OF CHILDREN

ಉತ್ತರ: **A.** ಸೈನ್ಯ

**6.** ಕಾರ್ಲೆಯಲ್ಲಿ ಚೈತ್ಯಾಲಯ ನಿರ್ಮಿಸಿದ ರಾಜ ಸಂತತಿ.

**A.** ಕದಂಬರು **B.** ಗುಪ್ತರು

**C.** ಶಾತವಾಹನರು **D.** ಚಾಲುಕ್ಯರು

ಉತ್ತರ: **C.** ಶಾತವಾಹನರು

**7.** ಗಂಗರ ಕಾಲದಲ್ಲಿ "ಘಟಿಕಸ್ಥಾನ"ಗಳ ಸ್ಥಾಪನೆಯ ಮುಖ್ಯ ಉದ್ದೇಶ,

**A.** ನೀರಾವರಿಯ ಪೂರೈಕೆ

**B.** ಉನ್ನತ ಶಿಕ್ಷಣ

**C.** ಪ್ರಾಥಮಿಕ ಶಿಕ್ಷಣ

**D.** ಗ್ರಾಮಾಡಳಿತ

ಉತ್ತರ: **B.** ಉನ್ನತ ಶಿಕ್ಷಣ

**8.** ಹೇಳಿಕೆ (A) : ಗಂಗರು ಜೈನ ಮತಾವಲಂಬಿಗಳಾಗಿದ್ದರು.

ಪ್ರತಿಪಾದನೆ (R) : ಗಂಗರು ಶ್ರವಣಬೆಳಗೊಳದಲ್ಲಿ ಗೊಮ್ಮಟೇಶ್ವರ ಪ್ರತಿಮೆಯನ್ನು ಪ್ರತಿಷ್ಠಾಪಿಸಿದರು.

**A.** ಹೇಳಿಕೆ (A) ತಪ್ಪು

**B.** ಪ್ರತಿಪಾದನೆ (R) ಸರಿ

**C.** ಹೇಳಿಕೆ (A) ಮತ್ತು ಪ್ರತಿಪಾದನೆ (R) ಎರಡೂ ಸರಿ

**D.** ಹೇಳಿಕೆ (A) ಮತ್ತು ಪ್ರತಿಪಾದನೆ (R) ಎರಡೂ ತಪ್ಪು

ಉತ್ತರ: **C.** ಹೇಳಿಕೆ (A) ಮತ್ತು ಪ್ರತಿಪಾದನೆ (R) ಎರಡೂ ಸರಿ

**9.** ಇಮ್ಮಡಿ ಪುಲಿಕೇಶಿಯು "ದಕ್ಷಿಣ ಪಥೇಶ್ವರ" ಎಂದು ಬಿರುದಾಂಕಿತನಾದನು ಏಕೆಂದರೆ

**A.** ಧಾರ್ಮಿಕ ಸಾಮರಸ್ಯಕ್ಕೆ ನೀಡಿದ ಪ್ರೋತ್ಸಾಹ.

**B.** ಉತ್ತರದ ಹರ್ಷವರ್ಧನನನ್ನು ಸೋಲಿಸಿದ್ದನು.

**C.** ಕಲೆ ಮತ್ತು ವಾಸ್ತುಶಿಲ್ಪವನ್ನು ಪ್ರೋತ್ಸಾಹಿಸಿದ್ದನು.

**D.** ಹ್ಯೂಯೆನ್–ತ್ಸಾಂಗನನ್ನು ಸೋಲಿಸಿದ್ದನು.

ಉತ್ತರ: **B.** ಉತ್ತರದ ಹರ್ಷವರ್ಧನನನ್ನು ಸೋಲಿಸಿದ್ದನು.

NEEDS OF CHILDREN

**10.** ರಾಷ್ಟ್ರಕೂಟ ಸಾಮ್ರಾಜ್ಯದ ಸ್ಥಾಪಕ

**A.** ಗೋವಿಂದ  **B.** ಸಿಮುಖ

**C.** ಮಯೂರವರ್ಮ  **D.** ದಂತಿದುರ್ಗ

ಉತ್ತರ: **D.** ದಂತಿದುರ್ಗ

**11.** ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಜೋಡಿಸಿ, ಸರಿಯಾದ ಉತ್ತರವನ್ನು ಆಯ್ಕೆ ಮಾಡಿ

**i.** ಎರಡನೇ ಕರ್ಕನ ಪರಾಭವ

**ii.** ಚಾಲುಕ್ಯ ವಿಕ್ರಮ ಶಕೆ ಪ್ರಾರಂಭ

**iii.** ಬಸವೇಶ್ವರರ ಸಾಮಾಜಿಕ ಕ್ರಾಂತಿ

**iv.** ಬಿಜ್ಜಳನ ಆಳ್ವಿಕೆ ಪ್ರಾರಂಭ

**A. iii, ii, i, iv**  **B. i, ii, iv, iii**

**C. iv, i, ii, iii**  **D. ii, i, iii, iv**

ಉತ್ತರ: **B. i, ii, iv, iii**

**12.** ಚಿತ್ರದಲ್ಲಿರುವ ದೇವಾಲಯವನ್ನು ಹೆಸರಿಸಿ.



**A.** ಕೇಶವ ದೇವಾಲಯ  **B.** ವಿರೂಪಾಕ್ಷ ದೇವಾಲಯ

**C.** ಮಧುಕೇಶ್ವರ ದೇವಾಲಯ  **D.** ಹೊಯ್ಸಳೇಶ್ವರ ದೇವಾಲಯ

NEEDS OF CHILDREN

ಉತ್ತರ: **D.** ಹೊಯ್ಸಳೇಶ್ವರ ದೇವಾಲಯ

**13.** ಹೊಯ್ಸಳರ ದೇವಾಲಯಗಳಲ್ಲಿ ಕಂಡುಬಂದಿರುವ ಪ್ರಮುಖ ಲಕ್ಷಣ

**A.** ಮಾನ ಸ್ತಂಭಗಳು
**B.** ರಾಯಗೋಪುರ
**C.** ಗುಮ್ಮಟಗಳು
**D.** ನಕ್ಷತ್ರಾಕಾರದ ಗರ್ಭಗೃಹ

ಉತ್ತರ: **D.** ನಕ್ಷತ್ರಾಕಾರದ ಗರ್ಭಗೃಹ

**14.** ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಇದರ ಕಾರ್ಯ ಪಾಲನೆಗಾಗಿ ನೇಮಕವಾಗಿದ್ದಾರೆ.

**A.** ಗ್ರಾಮ ಪಂಚಾಯಿತಿ
**B.** ತಾಲ್ಲೂಕು ಪಂಚಾಯಿತಿ
**C.** ಜಿಲ್ಲಾ ಪಂಚಾಯಿತಿ
**D.** ನಗರಸಭೆ

ಉತ್ತರ: **A.** ಗ್ರಾಮ ಪಂಚಾಯಿತಿ

**15.** ಗ್ರಾಮೀಣ ಸ್ಥಳೀಯ ಸರಕಾರಕ್ಕೆ ಉತ್ತಮ ಉದಾಹರಣೆಯೆಂದರೆ,

**A.** ನಗರಸಭೆ
**B.** ಮಹಾನಗರ ಪಾಲಿಕೆ
**C.** ಪುರಸಭೆ
**D.** ತಾಲ್ಲೂಕು ಪಂಚಾಯಿತಿ

ಉತ್ತರ: **D.** ತಾಲ್ಲೂಕು ಪಂಚಾಯಿತಿ

**16.** "ಬೃಹತ್ ಮಹಾನಗರ ಪಾಲಿಕೆ" ಕಂಡು ಬಂದಿರುವ ನಗರ.

**A.** ಮಂಗಳೂರು
**B.** ಬೆಂಗಳೂರು
**C.** ಮೈಸೂರು
**D.** ಕೋಲಾರ

ಉತ್ತರ: **B.** ಬೆಂಗಳೂರು

**17.** "ಗಯೋಟ್ಸ್"ಗಳು ಕಂಡುಬಂದಿರುವ ಸಾಗರದ ಭಾಗ,

**A.** ಖಂಡಾವರಣ ಪ್ರದೇಶ
**B.** ಖಂಡಾವರಣ ಇಳಿಜಾರು ಪ್ರದೇಶ
**C.** ಆಳಸಾಗರದ ಮೈದಾನ
**D.** ಸಾಗರ ತಗ್ಗು

NEEDS OF CHILDREN

ಉತ್ತರ: **C.** ಆಳಸಾಗರದ ಮೈದಾನ

**18.** ಸಾಗರ ಪ್ರಪಾತಕ್ಕೆ ಉತ್ತಮ ಉದಾಹರಣೆ,

**A.** ಟೊಂಗ **B.** ಸೂಯೆಜ್

**C.** ಜಾವ **D.** ಪನಾಮ

ಉತ್ತರ: **A.** ಟೊಂಗ

**19.** ವಾಯು ಮಾಲಿನ್ಯದ ಪರಿಣಾಮವೆಂದರೆ,

**A.** ಪ್ರವಾಹ **B.** ಓಝೋನ್ ಕ್ಷೀಣತೆ

**C.** ಭೂಕುಸಿತ **D.** ಜಲಚರಗಳ ನಾಶ

ಉತ್ತರ: **B.** ಓಝೋನ್ ಕ್ಷೀಣತೆ

**20.** ಚರಂಡಿ ನೀರಿನ ಸಂಸ್ಕರಣೆ ಈ ಕೆಳಗಿನ ಯಾವ ಅಂಶವನ್ನು ಪ್ರತಿನಿಧಿಸುವುದು

**A.** ವಾಯು ಮಾಲಿನ್ಯ ನಿಯಂತ್ರಣ

**B.** ಶಬ್ದ ಮಾಲಿನ್ಯ ನಿಯಂತ್ರಣ

**C.** ವಿಕಿರಣ ಮಾಲಿನ್ಯ ನಿಯಂತ್ರಣ

**D.** ಜಲ ಮಾಲಿನ್ಯ ನಿಯಂತ್ರಣ

ಉತ್ತರ: **D.** ಜಲ ಮಾಲಿನ್ಯ ನಿಯಂತ್ರಣ

**II. 21** ರಿಂದ **28** ರವರೆಗಿನ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸುವುದು.

**21.** ಕಳಿಂಗ ಯುದ್ಧದ ಪರಿಣಾಮಗಳನ್ನು ತಿಳಿಸಿ. **2** ಅಂಕ

- ಪಟ್ಟಾಭಿಷಿಕ್ತನಾಗಿ ಎಂಟು ವರ್ಷಗಳ ನಂತರ ಅಶೋಕನು ಕಳಿಂಗವನ್ನು ವಶಪಡಿಸಿಕೊಂಡನು.
- ಈ ಯುದ್ಧದಲ್ಲಿ ಒಂದು ಲಕ್ಷದ ಐವತ್ತು ಸಾವಿರ ಸೈನಿಕರು ಸೆರೆಯಾದರು.
- ಒಂದು ಲಕ್ಷದಷ್ಟು ಜನ ಯುದ್ಧದಲ್ಲಿ ಮೃತರಾದರು. ಇಂತಹ ಯುದ್ಧಗಳಿಂದಾಗುವ ಸಾವು, ನೋವುಗಳಿಂದ ಅಶೋಕ ಚಕ್ರವರ್ತಿಯು ಜರ್ಜರಿತನಾದನು.
- ಹೀಗಾಗಿಯೆ ಕಳಿಂಗವನ್ನು ವಶಪಡಿಸಿಕೊಂಡ ನಂತರ ಅಶೋಕನು ವಿಚಲಿತಗೊಂಡು ಪಶ್ಚಾತ್ತಾಪದಿಂದ 'ಧಮ್ಮದ' ಕಡೆಗೆ ಪ್ರೇರೇಪಿತನಾದನು ಹಾಗು ಶಾಂತಿಯನ್ನು ಪ್ರತಿಪಾದಿಸಿದನು.

ಅಥವಾ

NEEDS OF CHILDREN

ಕನಿಷ್ಕನ ಧಾರ್ಮಿಕ ಸಾಧನೆಗಳನ್ನು ತಿಳಿಸಿ.

- ಕನಿಷ್ಕನು ಬೌದ್ಧ ಧರ್ಮಕ್ಕೆ ನೀಡಿದ ಆಶ್ರಯದಿಂದಾಗಿ ಅದು ಮತ್ತಷ್ಟು ಸಮೃದ್ಧಿಯಿಂದ ಬೆಳೆಯಲು ಸಾಧ್ಯವಾಯಿತು.
- ಅಶ್ವಘೋಷ, ವಸುಮಿತ್ರ, ಸಂಗರಕ್ಷ ಮುಂತಾದ ಬೌದ್ಧ ವಿದ್ವಾಂಸರನ್ನು ಇವನ ಕಾಲದಲ್ಲಿ ಕಾಣುತ್ತೇವೆ.
- ನಾಲ್ಕನೆಯ ಬೌದ್ಧ ಸಮಾವೇಶವನ್ನು ಕಾಶ್ಮೀರದಲ್ಲಿ ಕನಿಷ್ಕನ ನೇತೃತ್ವದಲ್ಲಿಯೇ ನಡೆಸಲಾಯಿತು.
- ಈತನೂ ಅಶೋಕನ ರೀತಿಯಲ್ಲಿಯೇ ಬೌದ್ಧಧರ್ಮ ಪ್ರಚಾರಕ್ಕಾಗಿ ಮಧ್ಯಏಷ್ಯ ಹಾಗೂ ಚೀನಾಗಳಿಗೆ ನಿಯೋಗಗಳನ್ನು ಕಳುಹಿಸಿದ್ದನು.

**22.** ಕೈಲಾಸನಾಥ ದೇವಾಲಯ (ಎಲ್ಲೋರಾ) ವನ್ನು ಕುರಿತು ಬರೆಯಿರಿ. **2** ಅಂಕ

- ಒಂದನೇ ಕೃಷ್ಣನು ಕಟ್ಟಿಸಿದ ಎಲ್ಲೋರಾದ ಕೈಲಾಸನಾಥ ಮಂದಿರವು ಏಕಶಿಲೆಯ ಅದ್ಭುತ ರಚನೆಯಾಗಿದೆ.
- 100 ಅಡಿ ಎತ್ತರ ,276 ಅಡಿ ಉದ್ದ ಹಾಗೂ154 ಅಡಿ ಅಗಲವಾಗಿದ್ದು, ಬೃಹತ್ ಬಂಡೆಯನ್ನು ಕೊರೆದು ಕಟ್ಟಲಾಗಿದೆ.
- ಅಲ್ಲಿಯೇ ಪ್ರಸಿದ್ಧ ದಶಾವತಾರ ಗುಹಾಲಯವಿದೆ.

ಅಥವಾ

ಕೆರೆಗಳನ್ನು ನಾವು ಸಂರಕ್ಷಿಸಬೇಕು. ಏಕೆ?

- ಸರಿಯಾದ ಸರೋವರದ ಕಾರ್ಯವು ಹೆಚ್ಚಿನ ಪ್ರಮಾಣದ ನೀರನ್ನು ಸಂಗ್ರಹಿಸುವ ಮೂಲಕ ಮತ್ತು ಕೊರತೆಯ ಸಮಯದಲ್ಲಿ ಅದನ್ನು ಬಿಡುಗಡೆ ಮಾಡುವ ಮೂಲಕ ಪ್ರವಾಹ ಮತ್ತು ಅನಾವೃಷ್ಟಿಯ ಪರಿಣಾಮವನ್ನು ತಗ್ಗಿಸಬಹುದು .
- ಸರೋವರಗಳು ಅಂತರ್ಜಲವನ್ನು ಮರುಪೂರಣಗೊಳಿಸಲು ಸಹ ಕೆಲಸ ಮಾಡುತ್ತವೆ, ಕೆಳಭಾಗದ ಜಲಮೂಲಗಳ ನೀರಿನ ಗುಣಮಟ್ಟವನ್ನು ಧನಾತ್ಮಕವಾಗಿ ಪ್ರಭಾವಿಸುತ್ತವೆ ಮತ್ತು ಪ್ರದೇಶದ ಜೀವವೈವಿಧ್ಯತೆ ಮತ್ತು ಆವಾಸಸ್ಥಾನವನ್ನು ಸಂರಕ್ಷಿಸುತ್ತದೆ.

**23.** "ಚೋಳರು ಉತ್ತಮವಾದ ಗ್ರಾಮಾಡಳಿತ ವ್ಯವಸ್ಥೆಯನ್ನು ಹೊಂದಿದ್ದರು". – ಈ ಹೇಳಿಕೆಯನ್ನು ಸಮರ್ಥಿಸಿ. **2** ಅಂಕ

- ಚೋಳರು ಉತ್ತಮವಾದ ಹಾಗೂ ದಕ್ಷ ಆಡಳಿತ ವ್ಯವಸ್ಥೆಯನ್ನು ತಮ್ಮ ರಾಜ್ಯದಲ್ಲಿ ಏರ್ಪಡಿಸಿದ್ದರು. ರಾಜ್ಯವನ್ನು ಮಂಡಲಂ,
- ಕೊಟ್ಟಂಗಿ, ನಾಡು, ಕುರ್‍ರಂ ಅಥವಾ ಗ್ರಾಮ ಸಮುದಾಯ ಹಾಗೂ ತರ–ಕುರಂ ಎಂದು ವಿಭಾಗಿಸಲಾಗಿತ್ತು. ಪ್ರತಿ ಗ್ರಾಮದಲ್ಲೂ 'ಊರ್' ಎಂಬ ಪ್ರಜೆಗಳ ಸಭೆ ಇತ್ತು.

NEEDS OF CHILDREN

- ಚೋಳರ ಆಳ್ವಿಕೆಯ ಪ್ರಮುಖ ಲಕ್ಷಣವೆಂದರೆ ಗ್ರಾಮದ ಸ್ವಯಮಾಧಿಪತ್ಯದ ಬೆಳವಣಿಗೆ. ಗ್ರಾಮ ಸಭೆಗಳು ಪ್ರಥಮ ಸಭೆಗಳಾಗಿದ್ದವು.
- ತರ–ಕುರ್‍ರಂ ಒಂದು ಹಳ್ಳಿ. ಪ್ರತಿ ಕುರ್‍ರಂಗೂ 'ಮಹಾಸಭಾ' ಎನ್ನುವ ಗ್ರಾಮಸಭೆ ಇದ್ದಿತು. ಇದನ್ನು 'ಪೆರುಂಗುರಿ' ಎಂದು, ಅದರ ಸದಸ್ಯರನ್ನು 'ಪೆರುಮಕ್ಕಳ್' ಎಂದು ಕರೆಯಲಾಗುತ್ತಿತ್ತು.
- ಸದಸ್ಯರನ್ನು ಚುನಾವಣೆ ಮೂಲಕ ಆರಿಸಲಾಗುತ್ತಿತ್ತು. ಸಂಸ್ಕೃತ ವಿದ್ವಾಂಸರು ಹಾಗೂ ಶ್ರೀಮಂತರು ಈ ಚುನಾವಣೆಗೆ ಅರ್ಹರಾಗಿದ್ದರು.

ಅಥವಾ

"ನಾವು ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸಬೇಕು". – ಈ ಹೇಳಿಕೆಯನ್ನು ಸಮರ್ಥಿಸಿ.

- ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಬಹಳ ಮುಖ್ಯ ಏಕೆಂದರೆ ಇದು ಭವಿಷ್ಯದ ಪೀಳಿಗೆಗೆ ವೇಗವಾಗಿ ಬದಲಾಗುತ್ತಿರುವ ಜಗತ್ತಿನಲ್ಲಿ ಗುರುತನ್ನು ಮತ್ತು ನಿರಂತರತೆಯನ್ನು ಒದಗಿಸುತ್ತದೆ .
- ಪಾರಂಪರಿಕ ಕಟ್ಟಡಗಳು ಮೂಲತಃ ರಾಷ್ಟ್ರದ ಹಿಂದಿನ ಇತಿಹಾಸ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ.
- ಅವರು ಒಂದು ಪ್ರದೇಶದ ವಾಸ್ತುಶಿಲ್ಪದ ಪರಂಪರೆಯನ್ನು ಒಟ್ಟಾಗಿ ರೂಪಿಸುತ್ತಾರೆ.

**24.** ನಗರ ಪಾಲಿಕೆಗಳಿಂದ ದೊರೆಯುವ ಸೌಲಭ್ಯಗಳನ್ನು ಪಟ್ಟಿ ಮಾಡಿ. 2 ಅಂಕ

- ಆಯ–ವ್ಯಯ ಪಟ್ಟಿ ತಯಾರಿಸಿ ಮಂಡಳಿಯಿಂದ ಅನುಮೋದನೆ ಪಡೆಯುವುದು.
- ನಗರ ಅಥವಾ ಪಟ್ಟಣದ ಸಂಪೂರ್ಣ ಆಡಳಿತ ನೋಡಿಕೊಳ್ಳುವುದು.
- ಉತ್ತಮ ನಗರ ಯೋಜನೆಯನ್ನು ತಯಾರಿಸಿ ಕಾರ್ಯರೂಪಕ್ಕೆ ತರುವುದು.
- ಉತ್ತಮವಾದ ರಸ್ತೆ, ಸಾರಿಗೆ ವ್ಯವಸ್ಥೆ, ನೀರು ಸರಬರಾಜು, ಶಿಕ್ಷಣ, ವಿದ್ಯುಚ್ಛಕ್ತಿ, ಮಾರುಕಟ್ಟೆ, ಆರೋಗ್ಯ ಹಾಗೂ ಇನ್ನಿತರೆ ಸವಲತ್ತುಗಳನ್ನು ಉತ್ತಮ ರೀತಿಯಲ್ಲಿ ಒದಗಿಸುವುದು.
- ನಗರಗಳಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ಘನತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸೌಕರ್ಯ ಕಲ್ಪಿಸಿ ಸ್ವಚ್ಛತೆ ಕಾಪಾಡುವುದು.
- ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವುದು, ನಗರ ಸಭೆಯ ಕಟ್ಟಡಗಳು ಹಾಗೂ ಆಸ್ತಿಯನ್ನು ರಕ್ಷಿಸುವುದು.

ಅಥವಾ

ಗ್ರಾಮ ಪಂಚಾಯಿತಿಯಿಂದ ದೊರೆಯುವ ಸೌಲಭ್ಯಗಳನ್ನು ಪಟ್ಟಿ ಮಾಡಿ.

- ಪಂಚಾಯಿತಿಯ ಆಸ್ತಿಯನ್ನು ರಕ್ಷಿಸಿ ಕಾಪಾಡಿಕೊಳ್ಳುವುದು.

NEEDS OF CHILDREN

- ಸ್ಥಳೀಯ ಮಂಡಳಿಯ ವಾರ್ಷಿಕ ಆಯವ್ಯಯದ ಮುಂಗಡ ಪತ್ರ ತಯಾರಿಸುವುದು.
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಯೋಜನೆಗಳನ್ನು ಕೈಗೊಳ್ಳುವುದು.
- ರಸ್ತೆ ನಿರ್ಮಾಣ, ವಿದ್ಯುದೀಕರಣ, ಗೃಹನಿರ್ಮಾಣ ಮತ್ತು ಕುಡಿಯುವ ನೀರಿನ ಸರಬರಾಜು ಮುಂತಾದ ಅಭಿವೃದ್ಧಿ ಕೆಲಸಗಳಿಗೆ ಕಾರ್ಯಯೋಜನೆ ರೂಪಿಸಿ ಅನುಷ್ಠಾನಗೊಳಿಸುವುದು.
- ಪ್ರಾಥಮಿಕ, ಪ್ರೌಢ, ವಯಸ್ಕರ ಮತ್ತು ಅನೌಪಚಾರಿಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು.
- ತಮ್ಮ ಪ್ರದೇಶಗಳಲ್ಲಿ ಸ್ವಚ್ಛತೆ ಮತ್ತು ನಿರ್ಮಲೀಕರಣವನ್ನು ಕಾಪಾಡುವುದು.

**25.** ಪರಿಸರ ಮಾಲಿನ್ಯದ ವಿಧಗಳನ್ನು ತಿಳಿಸಿ. **2** ಅಂಕ

1. ವಾಯುಮಾಲಿನ್ಯ,
2. ಜಲಮಾಲಿನ್ಯ,
3. ಮಣ್ಣಿನ ಮಾಲಿನ್ಯ ಮತ್ತು
4. ಶಬ್ದಮಾಲಿನ್ಯ.

ಅಥವಾ

**a)** ಚಿತ್ರದಲ್ಲಿರುವ ಜಲಪಾತವನ್ನು ಹೆಸರಿಸಿ.



ಜೋಗ ಜಲಪಾತ

**b)** ಯಾವ ನದಿಯು ಈ ಜಲಪಾತವನ್ನು ಸೃಷ್ಟಿಸಿದೆ?

ಶರಾವತಿ

**26.** ಗುಪ್ತರ ಕಾಲದ ಸಾಹಿತ್ಯ ಕೊಡುಗೆಗಳಾವುವು? **3** ಅಂಕ

- ಸುಪ್ರಸಿದ್ಧ ಸಂಸ್ಕೃತ ಕವಿ ಹಾಗೂ ನಾಟಕಕಾರ ಕಾಳಿದಾಸನು ಇದೇ ಕಾಲಕ್ಕೆ ಸೇರಿದವನು.

NEEDS OF CHILDREN

- ಈತನು ಮೇಘದೂತ ಹಾಗೂ ಋತುಸಂಹಾರಗಳೆಂಬ ಖಂಡಕಾವ್ಯಗಳನ್ನೂ ರಘುವಂಶ ಮತ್ತು ಕುಮಾರಸಂಭವ ಎಂಬ ಮಹಾಕಾವ್ಯಗಳನ್ನು ಬರೆದಿದ್ದಾನೆ.
- ಅಭಿಜ್ಞಾನ ಶಾಕುಂತಲವು ಅವನ ಶ್ರೇಷ್ಠ ನಾಟಕಗಳಲ್ಲಿ ಒಂದು.
- ಶೂದ್ರಕನ ಮೃಚ್ಛಕಟಿಕ ಹಾಗೂ
- ವಿಶಾಕದತ್ತನ ಮುದ್ರಾರಾಕ್ಷಸ ಈ ಕಾಲದ ಇತರ ಕೃತಿಗಳು.

**ಅಥವಾ**

ವರ್ಧನರ ಆಡಳಿತ ವ್ಯವಸ್ಥೆಯನ್ನು ವಿವರಿಸಿ.

- ರಾಜನ ಆಳ್ವಿಕೆಯಲ್ಲಿ ಮಂತ್ರಿಮಂಡಲವು ಸಹಕರಿಸುತ್ತಿತ್ತು,
- ಮಹಾಸಂಧಿವಿಗ್ರಹ (ಅನುಸಂಧಾನಗಳನ್ನು ಮಾಡುವವ), ಮಹಾಬಲಾಧಿಕೃತ (ಮಹಾಸೇನಾಪತಿ), ಭೋಗಪತಿ (ಕಂದಾಯ ಅಧಿಕಾರಿ), ದೂತ ಮುಂತಾದವರಿಂದ ಅಧಿಕಾರ ವರ್ಗವು ಕೂಡಿತ್ತು.
- ರಾಜ್ಯವು ಪ್ರಾಂತ್ಯಗಳಾಗಿ ವಿಂಗಡಿಸಲ್ಪಟ್ಟಿತ್ತು.
- ಭೂಕಂದಾಯವೇ ರಾಜ್ಯದ ಮುಖ್ಯ ಆದಾಯವಾಗಿತ್ತು. ಸಾಮಂತ ರಾಜರುಗಳು ಇವನಿಗೆ ಕಪ್ಪವನ್ನು ಕೊಡುತ್ತಿದ್ದರು.

**27.** ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳು ಯಾವುವು? 3 ಅಂಕ

- ಬಾದಾಮಿಯ ಚಾಳುಕ್ಯರು ಮಹಾನ್ ನಿರ್ಮಾಪಕರು ಹಾಗೂ ಕಲಾ ಪ್ರೇಮಿಗಳೂ ಆಗಿದ್ದರು.
- ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳಲ್ಲಿ ಸೊಗಸಾದ ಅತ್ಯುತ್ಕೃಷ್ಟವಾದ ದೇವಾಲಯಗಳನ್ನು ನಿರ್ಮಿಸಿದರು.
- ಇವರು 'ಚಾಳುಕ್ಯ ಶೈಲಿ' ಎಂಬ ವಿಶಿಷ್ಟ ಶಿಲ್ಪಕಲಾ ಶೈಲಿಯನ್ನು ಭಾರತೀಯ ವಾಸ್ತುಶಿಲ್ಪದಲ್ಲಿ ಪ್ರಾರಂಭಿಸಿದರು.
- ಬಾದಾಮಿಯಲ್ಲಿರುವ ಶಿಲೆಯಲ್ಲಿ ಕೊರೆದ ಗುಹಾಂತರ ದೇವಾಲಯಗಳನ್ನು ಇವರು ನಿರ್ಮಿಸಿದರು.
- ಅನೇಕ ಕಲಾವಿದರು ಮತ್ತು ಶಿಲ್ಪಕಾರರಿಗೆ ಇವರು ಪ್ರೋತ್ಸಾಹ ನೀಡಿದರು.

**ಅಥವಾ**

ಶಬ್ದ ಮಾಲಿನ್ಯದ ಮೂಲಗಳು ಯಾವುವು?

ಶಬ್ದಮಾಲಿನ್ಯದ ಮೂಲಗಳಾವುವೆಂದರೆ : ನೈಸರ್ಗಿಕ ಮೂಲಗಳು– ಗುಡುಗು, ಸಿಡಿಲು, ಮಿಂಚು, ಅತ್ಯಧಿಕಮಳೆ, ಆಲಿಕಲ್ಲು ಮಳೆ, ಜಲಪಾತಗಳು, ಸಮುದ್ರದ ಅಲೆಗಳು. ಮಾನವ ನಿರ್ಮಿತ ಮೂಲಗಳು – ಕೈಗಾರಿಕೆಗಳ ಶಬ್ದ, ವಾಹನಗಳ ಶಬ್ದ, ವಿಮಾನಗಳ ಶಬ್ದ, ಗಣಿಗಾರಿಕೆ, ನಗರಪ್ರದೇಶಗಳ ಶಬ್ದ.

**28.** ದಕ್ಷಿಣ ಭಾರತದ ಭೂಪಟವನ್ನು ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ. 3 ಅಂಕ

**a)** ಬನವಾಸಿ

**b)** ಶ್ರವಣಬೆಳಗೊಳ

**c) ತಲಕಾಡು**



**ಅಥವಾ**

**ಭಾರತದ ಭೂಪಟವನ್ನು ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.**

**a) ನಾಸಿಕ್**

**b) ಬ್ರೋಚ್**

**c) ಭಟ್ಕಳ**

